ಶ್ರೀ ಹೆಚ್. ಡಿ. ಬಸವರಾಜು : ಉಪಾಧ್ಯಕ್ಷರೆ, ನನಗೆ ಉತ್ತರ ಬೇಕಾಗಿಲ್ಲ, ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ತಾವು ಸ್ಥಳೀಯ ಪೊಲೀಸರಿಂದ ವರದಿಯನ್ನು ತರಿಸಿಕೊಳ್ಳಬಹುದು, ಆದರೆ ಇದನ್ನು ದಯವಿಟ್ಟು ಸಿ.ಓ.ಡಿ.ಗೆ ಒಪ್ಪಿಸಿ ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಇದು ಎರಡನೇ ಪ್ರಕರಣ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಆ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗಿಲ್ಲ ಎಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಾಗ ತಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕು, ಇದನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಇಲ್ಲಿಯವರೆಗೆ ಏನೇನಾಗಿದೆ ಎಂಬ ಬಗ್ಗೆ, ಪೊಲೀಸಿನವರು ತನಿಖೆ ಏನು ಮಾಡಿದ್ದಾರೆ ಎಂಬ ಬಗ್ಗೆ ನಾಳೆ ಸಂಪೂರ್ಣವಾದ ಉತ್ತರವನ್ನು ಕೊಡುತ್ತೇನೆ ಅದರ ಬಗ್ಗೆ ಮಾನ್ಯ ಸದಸ್ಯರು ಸಮಾಧಾನ ಇಲ್ಲದಿದ್ದರೆ ಬೇರೆ ಪ್ರಶ್ನೆಯನ್ನು ಕೇಳಬಹುದು.

ಉಪಾಧ್ಯಕ್ಷರು : ಅವರು ಉತ್ತರವನ್ನು ಕೊಟ್ಟಮೇಲೆ ತಮ್ಮ ಮನಸ್ಸಿನ ಪ್ರಕಾರ ಆಗಲಿಲ್ಲ ಎಂದರೆ ಮತ್ತೆ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಸಿ.ಓ.ಡಿ.ಗೆ ವಹಿಸಬೇಕಾಗುತ್ತದೆ, ಏಕೆಂದರೆ ಸ್ಥಳೀಯ ಪೊಲೀಸರಿಂದ ಏನಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಈ ಇನ್‌ಸ್ಪೆಕ್ಟರ್ಸ್, ಸಬ್ ಇನ್‌ಸ್ಪೆಕ್ಟರ್ಸ್ ನಾವು ಹೇಳಿದವರಿಗೆ ಹಾಕಿಬಿಡುತ್ತಾರೆ. ನ್ಯಾಚುರಲಿ ನಾಳೆ ಇನ್‌ಫ್ಲ್ಯುಯೆನ್ಸ್ ಮಾಡತಕ್ಕಂಥ ಸಾಧ್ಯತೆ ಇದೆ. ಅದಕ್ಕಾಗಿ ಇಂಡಿಪೆಂಡೆಂಟ್ ಏಜೆನ್ಸಿ ಸಿ.ಓ.ಡಿ. ಯಿಂದ ಹೋದರೆ ಅನುಕೂಲವಾಗುತ್ತದೆ.

ಧಾರವಾಡ ಜಿಲ್ಲೆ ಪುನರ್ ವಿಂಗಡಣೆ ಕುರಿತು

+ ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಸನ್ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಸರ್ಕಾರದವರು ಜಿಲ್ಲಾ ಪುನರ್ ವಿಂಗಡಣೆಯ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯನ್ನು ಒಡೆದು ಗದಗ್ ಜಿಲ್ಲೆ ಮತ್ತು ಹಾವೇರಿ ಜಿಲ್ಲೆ ಮಾಡಿದ್ದಾರೆ. ಅದಕ್ಕೆ ನಾನು ಸ್ವಾಗತ ಮಾಡುತ್ತಿದ್ದೇನೆ. ಆದರೆ ಈ ಒಂದು ಗದಗ್ ಜಿಲ್ಲೆ ಮಾಡುವಂಥ ಸಂದರ್ಭದಲ್ಲಿ ಮೊದಲು ನವಿಲುಗುಂದ ಮತ್ತು ನರಗುಂದ ತಾಲ್ಲೂಕನ್ನೂ ಸಹ ಆ ಗದಗ್ ಜಿಲ್ಲೆಯಲ್ಲಿ ಸೇರ್ಪಡೆ ಮಾಡಿದ್ದರು. ಮುಂದೆ ನವಿಲುಗುಂದ ತಾಲ್ಲೂಕಿನಲ್ಲಿ ಹೋರಾಟ ನಡೆಯಿತು, ಜನರು ನಾವು ಧಾರವಾಡ ಜಿಲ್ಲೆಯಲ್ಲೆ ಉಳಿಯುತ್ತೇವೆ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರಿಂದ ಸರ್ಕಾರ ನವಿಲುಗುಂದ ತಾಲ್ಲೂಕು ಧಾರವಾಡ ಜಿಲ್ಲೆಯಲ್ಲೇ ಉಳಿಯಲು ಒಂದು ಸೂಚನೆಯನ್ನು, ಒಂದು ಅಭಿಪ್ರಾಯವನ್ನು ಕೊಟ್ಟಿತು. ಆದರೆ ಇವೊತ್ತು ನರಗುಂದ ತಾಲ್ಲೂಕಿನ ಜನ ನವಿಲುಗುಂದ ಘಾಟಿ ಗದಗ್‌ಗೆ ಹೋಗಬೇಕಾಗುತ್ತದೆ. ಅಂತಹ ಸಮಯದಲ್ಲಿ ಇವೊತ್ತು ನವಿಲುಗುಂದ ಧಾರವಾಡದಲ್ಲೇ ಉಳಿದಿದೆ, ಆದರೆ ನರಗುಂದ ಮಾತ್ರ ಇವೊತ್ತು ಗದಗ್ ಜಿಲ್ಲೆಗೆ ಸೇರಿಸುವ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದು ಇವೊತ್ತು ಅಲ್ಲಿ ಜನತೆ ಹೋರಾಟವನ್ನು ಮಾಡುತ್ತಿದ್ದಾರೆ. ಆಗಸ್ಟ್ 4ನೇ ತಾರೀಕಿನಿಂದ ನರಗುಂದ ತಾಲ್ಲೂಕಿನಾದ್ಯಂತ

ಸಂಪೂರ್ಣ ಬಂದ್ ಆಗಿದೆ. ಅಲ್ಲಿ ಯಾವುದೇ ಒಂದು ವ್ಯಾಪಾರ ವಹಿವಾಟು ನಡೆಯುತ್ತಿಲ್ಲ. ಶಾಲೆಗಳೆಲ್ಲಾ ಮುಚ್ಚಿದ್ದಾವೆ, ಯಾವುದೇ ಚಹಾದ ಅಂಗಡಿ ತೆರೆದಿಲ್ಲ. ಈ ರೀತಿಯ ಒಂದು ಹೋರಾಟ ಅಲ್ಲಿ ನಡೆಯುತ್ತಾ ಇದೆ. ಮತ್ತು ಧಾರವಾಡ ಜಿಲ್ಲೆಯ ಜನರ ಭಾವನೆಯಲ್ಲಿ ಆ ತಾಳ್ಮೆಯನ್ನು ಅಲ್ಲಿಯೇ ಉಳಿಯಬೇಕೆಂದು ಇದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಅಲ್ಲಿನ ಜನರ ಅಭಿಪ್ರಾಯವನ್ನು ತೆಗೆದುಕೊಂಡು ತಕ್ಷಣ ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಇವೊತ್ತು ಅಲ್ಲಿ ಜನ ಏನು ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ಪ್ರತಿ ದಿವಸ ಧರಣಿ ಕೂರುತ್ತಿದ್ದಾರೆ, ಅಲ್ಲಿನ ಲೋಕಸಭಾ ಸದಸ್ಯರೂ ಕೂಡ ನರಗುಂದ ತಾಲ್ಲೂಕು ಧಾರವಾಡ ಜಿಲ್ಲೆಯಲ್ಲಿ ಉಳಿಯಬೇಕೆಂದು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ನರಗುಂದ ತಾಲ್ಲೂಕಿಗೆ ಧಾರವಾಡ ಜಿಲ್ಲೆ ಹತ್ತಿರವಾಗುತ್ತದೋ, ಗದಗ್ ಜಿಲ್ಲೆ ಹತ್ತಿರವಾಗುತ್ತದೋ ಎನ್ನುವುದನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕು. ಇವೊತ್ತು ಅಲ್ಲಿ ನಬಾರ್ಡ್ ಯೋಜನೆಯಲ್ಲಿ ತಿರ್ಲಾಪುರ್ ರೋಡ್, ಮತ್ತು ಬ್ಯಾಹಟ್ಟಿ ತಿರ್ಲಾಪುರ್, ನರಗುಂದದವರೆಗೆ ರಸ್ತೆ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಬಹುಶಃ 40-45 ಕಿ.ಮೀ. ಅಂತರ ಈ ಹುಬ್ಬಳ್ಳಿ-ಧಾರವಾಡಕ್ಕೆ ಆಗುತ್ತಿದೆ. ಮತ್ತು ನರಗುಂದ 60 ಕಿ.ಮೀ. ನಷ್ಟು ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಸಹಿತ ನಾವು ಇದನ್ನು ಪರಿಗಣಿಸಿದರೆ ಮತ್ತು ನರಗುಂದ ತಾಲ್ಲೂಕಿನ ಜನ ಸಾಮಾಜಿಕವಾಗಿದ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಧಾರವಾಡ ಮತ್ತು ಹುಬ್ಬಳ್ಳಿಯೊಂದಿಗೆ ತಮ್ಮ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ತಮ್ಮ ವ್ಯವಹಾರವನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಇವೊತ್ತು ಅಲ್ಲಿನ ಜನತೆಯ ಭಾವನೆಗಳನ್ನು ಸರ್ಕಾರ ತಿಳಿದುಕೊಳ್ಳಬೇಕಾಗಿದೆ. ಅಲ್ಲಿ ಏನು ಸತ್ಯಾಗ್ರಹ ನಡೆಯುತ್ತಿದೆ ಅದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಪ್ರತಿ ದಿವಸ ಇಂಟೆಲಿಜೆನ್ಸಿಯವರ ವರದಿ ಬರುತ್ತಾ ಇದೆ. ಅದನ್ನು ಸಹಿತ ಗಮನಿಸಬೇಕಾಗುತ್ತದೆ. ಇವೊತ್ತು ಸರ್ಕಾರ ಆ ಎಲ್ಲಾ ಹೋರಾಟವನ್ನು ಗಮನಿಸಿ ತಕ್ಷಣ ತಮ್ಮ ಅಧಿಕಾರಿಗಳನ್ನಾಗಲೀ ಅಥವಾ ಮಂತ್ರಿಗಳನ್ನಾಗಲಿ ಕಳುಹಿಸಿ ಅದರ ಬಗ್ಗೆ ವಿಚಾರ ಮಾಡಬೇಕು, ಇಲ್ಲದೆ ಹೋದರೆ ಇವೊತ್ತು ಏನು ಗಾಂಧೀಜಿಯ ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹ ನಡೆಯುತ್ತಿದೆ ಅದು ಯಾವುದೇ ಸಂದರ್ಭದಲ್ಲಿ ಹಿಂಸಾಚಾರಕ್ಕೆ ಎಡೆ ಮಾಡಬಹುದು. ಏಕೆಂದರೆ ಹಿಂದೆ ನರಗುಂದ ಬಂದ್ ಆಗಿದ್ದಾಗ, ರೈತರು ಹೋರಾಟ ಮಾಡುವಂತಹ ಸಂದರ್ಭ ಹಲವಾರು ರೈತರ ಬಲಿದಾನ ಆಗಿರುವಂಥದ್ದು ಇದೆ. ಆ ಒಂದು ಹೋರಾಟಕ್ಕೆ ಸರ್ಕಾರ ಯಾವುದೇ ನಿರ್ಲಕ್ಷ್ಯ ಮಾಡದೆ ತಕ್ಷಣ ಗಂಭೀರವಾದ ಕ್ರಮವನ್ನು ತೆಗೆದುಕೊಂಡು ಧಾರವಾಡ ಜಿಲ್ಲೆಯಲ್ಲಿಯೇ ನರಗುಂದ ತಾಲ್ಲೂಕನ್ನು ಉಳಿಸಿಕೊಳ್ಳುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಉಪಾಧ್ಯಕ್ಷರೆ, ಯಾವುದಾದರೊಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿದಾಗ ಸಾರ್ವಜನಿಕರಿಂದ ಎಲ್ಲಾ ಕಡೆಯು ಪರ, ವಿರೋಧ ಬಂದೇ ಬರುತ್ತದೆ. ನಾನು ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ, ಇಂತಹವುದನ್ನೆಲ್ಲಾ ಮಾಡುವುದು

ಬೇಡ. ಈಗಾಗಲೇ ಫೈನಲ್ ನೋಟಿಫಿಕೇಷನನ್ನು ಇಷ್ಯೂ ಮಾಡಿದ್ದೇವೆ. ನಾಳೆ 24ನೇ ತಾರೀಖಿನಂದು ಹೊಸ ಜಿಲ್ಲೆಯನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡುವವರಿದ್ದಾರೆ. ಅವರು ಹೇಳುತ್ತಾರೆ ಅಲ್ಲಿ ಬಹಳ ಜನ ವಿರೋಧ ಮಾಡುತ್ತಾರೆ ಎಂದು. ನರಗುಂದ ತಾಲ್ಲೂಕು ಗದಗ್‌ನಲ್ಲೇ ಇರಬೇಕು ಎಂದು ಅದರ ಪರವಾಗಿರುವ ಬಹಳಷ್ಟು ಸಾರ್ವಜನಿಕರು ನನ್ನ ಹತ್ತಿರ ಬಂದು ಹೇಳಿದ್ದಾರೆ, ಮುಖ್ಯಮಂತ್ರಿಗಳ ಹತ್ತಿರವೂ ಕೂಡ ಹೇಳಿದ್ದಾರೆ. ಅದಕ್ಕೆ ನಾನು ಅವರ ಮುಖಾಂತರ ಈ ಮನೆಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮ ಜನರಿಗೆ ಈ ರೀತಿ ಸತ್ಯಾಗ್ರಹ ಮಾಡಿ ಎಂದು ಹೇಳಬಾರದು, ಇದನ್ನು ನಿಲ್ಲಿಸಬೇಕು ಎಂದು ತಾವು ಹೇಳಬೇಕು. ಸುಮಾರು 20 ವರ್ಷಗಳಿಂದ ಹೊಸ ಜಿಲ್ಲೆಗಳನ್ನು ಮಾಡಲಿಕ್ಕೆ ಆಗಿರಲಿಲ್ಲ. ಒಂದು ಹೊಸ ಅಧ್ಯಾಯವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ಪ್ರಾರಂಭ ಮಾಡಿದ್ದಾರೆ. ಸಧ್ಯದ ಪರಿಸ್ಥಿತಿಯಲ್ಲಿ ಅದನ್ನು ಕನ್ಸಿಡರ್ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಜಿಲ್ಲಾ ಉಸ್ತುವಾರಿ ಸಚಿವರಿದ್ದಾರೆ, ಅಧಿಕಾರಿಗಳಿದ್ದಾರೆ ಅವರು ಅಲ್ಲಿಗೆ ಹೋಗಿ ವಿಚಾರ ಮಾಡಬೇಕು. ಅದು ಬಿಟ್ಟು ಅದನ್ನು ನಾವು ಪರಿಶೀಲನೆ ಮಾಡುವುದಿಲ್ಲ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುವಂತಹದ್ದು ಸರಿಯಲ್ಲ. ಅದಕ್ಕೆ ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು, ಅಲ್ಲಿನ ನಾಗರೀಕರು, ಪ್ರಮುಖ ವ್ಯಾಪಾರಸ್ಥರು ಇವೊತ್ತಿನ ದಿವಸ ಸತ್ಯಾಗ್ರಹ ಮಾಡುತ್ತಿದ್ದಾರೆ.

ಶ್ರೀ ರಮೇಶ್ ಸಿ.ಜಿಗಜಿಣಗಿ : ಉಪಾಧ್ಯಕ್ಷರೆ, ಮಾನ್ಯ ನಾಯಕರು ಇಲ್ಲೇ ಇದ್ದಾರೆ. ಶೂನ್ಯವೇಳೆಯನ್ನು ಎಷ್ಟು ಗಂಟೆಗಳ ಕಾಲ ತಾವು ತೆಗೆದುಕೊಳ್ಳುತ್ತೀರಿ ಎಂಬುದನ್ನು ನಿರ್ಣಯ ಮಾಡಿದ್ದೀರಾ? ಮತ್ತೆ ಶೂನ್ಯವೇಳೆಯಲ್ಲಿ ಸಪ್ಲಿಮೆಂಟರಿ ಕೇಳುವುದಕ್ಕೆ ಏನಾದರೂ ಅವಕಾಶ ಇದೆಯೇ? ದಯಮಾಡಿ ರೂಲ್ಸ್ ಪ್ರಕಾರ ಸದನ ನಡೆದುಕೊಂಡು ಹೋಗಬೇಕಾಗುತ್ತದೆ.

ಉಪಾಧ್ಯಕ್ಷರೆ : ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ವಿನಂತಿ ಇಷ್ಟೆ. ನರಗುಂದ ತಾಲ್ಲೂಕಿನವರು ಕಳೆದ 8-10 ದಿವಸದಿಂದ ಸತ್ಯಾಗ್ರಹವನ್ನು ಮಾಡಿ, ಸಂಪೂರ್ಣವಾಗಿ ನರಗುಂದವನ್ನು ಬಂದ್ ಮಾಡಿದ್ದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ. ಈಗಾಗಲೇ ನಮ್ಮ ಕಂದಾಯಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ಅವರು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಸಹ ಆಗಿದ್ದಾರೆ. ಅವರು ಸ್ವತಃ ಅಲ್ಲಿಗೆ ಹೋಗಿ ಆ ಜನರಿಗೆ ಒಂದು ತಿಳುವಳಿಕೆಯನ್ನು ಕೊಟ್ಟು ಏನಾದರೂ ಮಾಡಿ ಆ ಸತ್ಯಾಗ್ರಹವನ್ನು ನಿಲ್ಲಿಸಬೇಕು ಎಂಬುದು ನನ್ನ ಕೋರಿಕೆ. ಪಕ್ಷದ ವಿಚಾರಗಳನ್ನು ಪಕ್ಷದ ಕಚೇರಿಯಲ್ಲಿ ಮಾಡುವ ಜನರು ಬಹಳ ಕಡಿಮೆಯಾಗಿದ್ದಾರೆ. ಇಲ್ಲೆ ಆಗಲಿ, ಬೇರೆ ಕಡೆಯಾಗಲಿ ಪಕ್ಷಾಂತರ ಮಾಡಿಕೊಂಡು ಹೋದರೆ ತೊಂದರೆಯಾಗುತ್ತದೆ. ಇದರಿಂದ ನರಗುಂದದ ಜನರಿಗೆ ತೊಂದರೆಯಾಗಿದೆ, ಅವರಿಗೆ ಇವತ್ತು ಕೆಲಸಕ್ಕೆ ಹೋಗುವುದಕ್ಕೆ ತೊಂದರೆಯಾಗಿದೆ, ಮಾರುಕಟ್ಟೆಯೆಲ್ಲಾ ಸ್ಟಾಪ್ ಆಗಿದೆ.

ಆದುದರಿಂದ ದಯಮಾಡಿ ಕಂದಾಯ ಮಂತ್ರಿಯವರು ಜಿಲ್ಲಾ ಮಂತ್ರಿಯವರು ಜೊತೆಗೆ ಹೋಗಿ ಅಲ್ಲಿ ಅವರಿಗೆ ತಿಳುವಳಿಕೆ ಹೇಳಿ, ಅದಕ್ಕೆ ಒಂದು ನಿರ್ಣಯವನ್ನು ತೆಗೆದುಕೊಂಡರೆ ಸೂಕ್ತವೆಂದು ಹೇಳುತ್ತೇನೆ. ಇದರ ಜೊತೆಗೆ ಮಾನ್ಯ ಕಂದಾಯ ಮಂತ್ರಿಗಳು ನಿರ್ಣಯವನ್ನು ತೆಗೆದುಕೊಳ್ಳುವಾಗ ಸವದತ್ತಿ ತಾಲ್ಲೂಕನ್ನು ಧಾರವಾಡ ಜಿಲ್ಲೆಗೆ ಸೇರಿಸಬೇಕೆಂದು ಇದೆ. ಇದರ ಬಗ್ಗೆ ಈಗ ಮಾನ್ಯ ಉಪಾಧ್ಯಕ್ಷರು ಸಭೆಯಲ್ಲಿದ್ದಾರೆ, ಒಂದು ಹೇಳಿಕೆಯನ್ನು ಕೊಡಿಸಬೇಕು.

ಉಪಾಧ್ಯಕ್ಷರು : ಈಗ ಮಾನ್ಯ ಸಿದ್ದನಗೌಡರ್‌ರವರು ಸವದತ್ತಿ ವಿಚಾರವನ್ನು ಪ್ರಸ್ತಾಪ ಮಾಡಿದರು. ಇದನ್ನು ಜನರ ಹಿತದೃಷ್ಟಿಯಿಂದ ಧಾರವಾಡಕ್ಕೆ ಕೂಡಿಸುವುದು ಒಳ್ಳೆಯದೆಂದು ನಾವು ಮನವಿ ಮಾಡಿಕೊಂಡಿದ್ದೇವು. ಇದು 36 ಕಿ.ಮೀ. ದೂರವಿರುವುದರಿಂದ ಆಡಳಿತ ದೃಷ್ಟಿಯಿಂದ ಸೇರಿಸುವುದು ಸೂಕ್ತವೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ರಮೇಶ್ ಸಿ. ಜಿಗಜಿಣಗಿಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಮಾಡಿದರೆಂಬ ಹೆಸರು ಉಳಿಯುತ್ತದೆ. ಆದುದರಿಂದ ತಾವು ಈ ಒಂದು ಅವಕಾಶವನ್ನು ಬಿಡಬೇಡಿ.

ಉಪಾಧ್ಯಕ್ಷರು : ತಾಲ್ಲೂಕು ವಿಭಜನೆಯಾಗುವಾಗ ದಯಮಾಡಿ ಕನ್ಸಿಡರ್ ಮಾಡಬೇಕೆಂದು ತಮಗೆ ವಿನಂತಿ ಮಾಡುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಖಂಡಿತವಾಗಿ ಮಾಡುತ್ತೇವೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕು ವಿಭಜನೆ ಮಾಡುವಂಥಾದ್ದು ಮತ್ತು ವಿಂಗಡನೆ ಮಾಡತಕ್ಕಂಥಾದ್ದು 2000 ಎ.ಡಿಯ ನಂತರ ಈಗ ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಈಗ ಡೀ ಲಿಮಿಟೇಷನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಗಬೇಕು.

ಉಪಾಧ್ಯಕ್ಷರು : ನಾವು ಮಾಡುವಾಗ ಮಾಡಿ ಎಂದು ಹೇಳುತ್ತಾ ಇರುವುದು, ಈಗ ಮಾಡಿ ಎಂದು ನಾವು ಹೇಳಲಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಕಂದಾಯ ಸಚಿವರು ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಜಿಲ್ಲಾ ಸಚಿವನಾಗಿ ಹೇಳುವುದೆನೆಂದರೆ ಮಾನ್ಯ ಸದಸ್ಯರು ಏನು ಹೇಳಿದರು. ಅಲ್ಲಿ ನವಲಗುಂದ ತಾಲ್ಲೂಕಿನ ಜನರ ಬೇಡಿಕೆಗೆ 'ಹೂ' ಎಂದು ಈಗ ಇಲ್ಲಿ 'ಊಹೂ' ಎಂದು ಹೇಳುತ್ತಿದ್ದಾರೆಂದು ಹೇಳಿದರು. ನವಲಗುಂದ ತಾಲ್ಲೂಕಿನಲ್ಲಿ ಎಲ್ಲರೂ ಸೇರಿ

ಒಕ್ಕೊರಲಿನಿಂದ ಈ ವಿಷಯವನ್ನು ಕೇಳಿದ್ದಾರೆ. ನಮ್ಮ ಎಲ್ಲಾ ವರದಿಯಲ್ಲೂ ಕೂಡ ನವಲಗುಂದ ತಾಲ್ಲೂಕು ಧಾರವಾಡಕ್ಕೆ ಸೇರಬೇಕೆಂದು ಇದೆ. ಆ ದೃಷ್ಟಿಯಿಂದ ಮಾನ್ಯ ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಯವರು ನಾವೆಲ್ಲರೂ ಮೀಟಿಂಗ್ ಮಾಡಿ ಧಾರವಾಡ ಜಿಲ್ಲೆಗೆ ಬಿಟ್ಟುಕೊಟ್ಟಿದ್ದೇವೆ. ಇನ್ನು ಮಾನ್ಯ ಸದಸ್ಯರು ನರಗುಂದ ಮೊದಲಿನಿಂದಲೂ ಧಾರವಾಡಕ್ಕೆ ಸಂಪರ್ಕವಿದೆ ಎಂದು ಹೇಳಿದ್ದು, ಇದು ತಪ್ಪಾಗುತ್ತದೆ. ಇದು ಗದಗ್‌ನ ಸಬ್ ಡಿವಿಜನ್ ಆಗಿದೆ. ಅಸಿಸ್ಟೆಂಟ್ ಕಮೀಷನರ್ ಸಬ್ ಡಿವಿಜನ್ ಆಗಿ ನರಗುಂದ ಗದಗ್‌ಗೆ ಇದ್ದು, ಅವರು ಹೇಳಿದ ಹಾಗೆ ಲೋಕಸಭಾ ಸದಸ್ಯರು ಸತ್ಯಾಗ್ರಹ ಕುಳಿತ್ತಿದ್ದಾರೆಂದು ಏನು ಹೇಳಿದ್ದಾರೆ. ಅವರೆ ಪ್ರಜಾವಾಣಿ ಪೇಪರ್‌ನಲ್ಲಿ ನರಗುಂದ ಗದಗ್‌ಗೆ ಕೊಡುವುದು ಯೋಗ್ಯವೆಂದೂ ಆದರೆ ಜನರ ಭಾವನೆಗೆ ಸ್ಪಂದಿಸಿ ನಾನು ಕುಳಿತ್ತಿದ್ದೇನೆಂದು ಹೇಳಿದ್ದಾರೆ. ಅದು ಸುಳ್ಳಿಂದು ಸ್ಟೇಟ್‌ಮೆಂಟ್ ಕೊಡಲಿ, ಮಾನ್ಯ ಸಂಕೇಶ್ವರವರೇ ನರಗುಂದ ತಾಲ್ಲೂಕು ಗದಗ್‌ಗೆ ಕೊಡುವುದು ಸೂಕ್ತವೆಂದು ಹೇಳಿದ್ದಾರೆ. ಆದರೂ ಕೂಡ ನಾನು ಜನರ ಭಾವನೆಗೆ ಸ್ಪಂದಿಸಿ ಸತ್ಯಾಗ್ರಹ ಕುಳಿತಿದ್ದೇನೆಂದು ಹೇಳಿದ್ದಾರೆ. ಅವರು ಸುಳ್ಳು ಎಂದು ಹೇಳಲಿ, ಈಗಾಗಲೇ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅಲ್ಲಿ ಶೇ. 30ರಷ್ಟು ಅಂಗಡಿಗಳು ಪ್ರಾರಂಭವಾಗಿದೆ. ಇವತ್ತು ಕೆಲವು ಜನರು ನರಗುಂದ ಧಾರವಾಡಕ್ಕೆ ಇರಬೇಕೆಂದು ಹೇಳಿದರು. ಅವರೊಡನೆ ನಾನು ಮಾತನಾಡಿ ಕನ್ವಿನ್ಸ್ ಮಾಡಿ ಕಳುಹಿಸಿದ್ದೇನೆ. ಆ ದೃಷ್ಟಿಯಿಂದ ನರಗುಂದವನ್ನು ಗದಗ್‌ಗೆ ಸೇರಿಸುವುದು ಯೋಗ್ಯವೆಂದು ಹೇಳುತ್ತಿದ್ದೇನೆ. ಆದುದರಿಂದ ತಾವು ದಯಮಾಡಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಲೋಕಸಭಾ ಸದಸ್ಯರ ಬಗ್ಗೆ ಏನು ಹೇಳಿದ್ದಾರೆ ಅದು ಸರಿಯಲ್ಲ. ಅವರು ಅಲ್ಲೇ ಉಳಿಯಬೇಕೆಂದು ಸತ್ಯಾಗ್ರಹ ಕುಳಿತಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಯವರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಅದು ಸರಿಯಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಸಿದ್ದನಗೌಡರ್‌ರವರು ಹೇಳಿದ್ದಾರೆ. ಈಗ ಮಾನ್ಯ ಜಿಲ್ಲಾ ಸಚಿವರು ಮತ್ತು ಕಂದಾಯ ಸಚಿವರು ಅಲ್ಲಿಗೆ ಹೋಗಿ ಜನರ ಭಾವನೆಗಳನ್ನು ತಿಳಿದುಕೊಂಡು ಅವರಿಗೆ ಕನ್ವಿನ್ಸ್ ಮಾಡಿದರೆ ನಮ್ಮದು ಏನೂ ತಕರಾರು ಇಲ್ಲ. ಅವರು ಅಲ್ಲಿ ಪ್ರಮುಖರನ್ನು ಮತ್ತು ಜನರನ್ನು ಕನ್ವಿನ್ಸ್ ಮಾಡಿ ಅದು ಗದಗ್‌ಗೆ ಉಳಿಯಬೇಕೆಂದರೆ ನಮ್ಮದು ಏನೂ ಇಲ್ಲ. ಆದುದರಿಂದ ಅಲ್ಲಿನ ಜನರ ಭಾವನೆಗಳನ್ನು ನಾವು ಹೇಳಿದ್ದೇವೆ, ಅದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರು ಅಲ್ಲಿಗೆ ಹೋಗಿ ಕನ್ವಿನ್ಸ್ ಮಾಡಿ ಬರಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.